ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ರಕ್ಷಿತ್ | ಸಿ .ಡಬ್ಲ್ಯೂ :4 |
| ತಂದೆಯ ಹೆಸರು | : | ಚಿಕ್ಕೇಗೌಡ | ಪಿ .ಡಬ್ಲ್ಯೂ :4 |
| ವಯಸ್ಸು | : | 24 ವರ್ಷ | |
| ಉದ್ಯೋಗ | : | ದ್ವಿ ದ ಸ ತಾಲ್ಲೂಕು ಕಚೇರಿ , ಗುಬ್ಬಿ | |
| ವಾಸಸ್ಥಳ | : | ಕೊಟ್ಟನಹಳ್ಳಿ | |

ಸಾಕ್ಷಿಯನ್ನು ದಿಃ 16-04-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 30-12-2020 ರಿಂದ ರಿಂದ ಇಂದಿನವರೆಗೂ ಗುಬ್ಬಿಯ ತಾಲ್ಲೂಕು ಕಚೇರಿಯಲ್ಲಿ ದ್ವಿ ದ ಸ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 01-06-2024 ರಂದು ಬೆಳಗ್ಗೆ 9.45 ಕ್ಕೆ ಎಂದಿನಂತೆ ಕಚೇರಿಯ ಕರ್ತವ್ಯಕ್ಕೆ ಹಾಜರಾಗಿದ್ದೆ . ನನ್ನ ಕೊಠಡಿಯಲ್ಲಿದ್ದ HP Laser Jet 1018 ಪ್ರಿಂಟರ್ ಮತ್ತು ನನ್ನ ಪಕ್ಕದ ಟೇಬಲ್ ನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ -3 ರವರ ಟೇಬಲ್ ಮೇಲಿನ HP Laser Jet 1020 ಪ್ರಿಂಟರ್ ಗಳು ಕಾಣೆಯಾಗಿದ್ದವು . ನಾನು ಆ ದಿನ ಸ್ವಚ್ಛತಾ ಕರ್ತವ್ಯಕ್ಕೆ ಹಾಜರಾಗಿದ್ದ ಚಾಸಾ -2 ರವರನ್ನು ವಿಚಾರಿಸಿದೆ , ಅವರು ಪ್ರಿಂಟರ್ ಗಳ ಬಗ್ಗೆ ನನಗೆ ಗೊತ್ತಿಲ್ಲ, ನಾನು ಕಸ ಗುಡಿಸುತ್ತಿದ್ದ ಸಮಯ ಅಲ್ಲಿಗೆ ಬಂದ ಹುಡುಗನೊಬ್ಬ Horticulture ಅಧಿಕಾರಿಯ ಕಚೇರಿ ಎಲ್ಲಿದೆ ಎಂದು ಕೇಳಿದ .ಆ ಹುಡುಗ ಬೆನ್ನಿನ ಮೇಲೆ ಬ್ಯಾಗ್ ನೇತು ಹಾಕಿಕೊಂಡಿದ್ದ , ಒಂದು ಕೈಯಲ್ಲಿ ಮತ್ತೊಂದು ಬ್ಯಾಗ್ ಹಿಡಿದುಕೊಂಡಿದ್ದ ಎಂದು ಹೇಳಿದರು . ನಂತರ ನಾನು ಸದರಿ ವಿಚಾರವನ್ನು ಚಾಸಾ -1 ರವರಿಗೆ ತಿಳಿಸಿದೆ , ಅವರು ಠಾಣೆಗೆ ದೂರು ನೀಡಿದ್ದಾರೆ . ಮೇಲಿನ ವಿಚಾರಕ್ಕೆ ಸಂಬಂಧಿಸಿ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ .

ದಿಃ 06-07-2024 ರಂದು ಪೊಲೀಸರು ಮಧ್ಯಾಹ್ನ 2.00 ರಿಂದ 2.30 ರ ಅವಧಿಯಲ್ಲಿ ಆರೋಪಿತರನ್ನು ಕಚೇರಿಗೆ ಕರೆ ತಂದಿದ್ದರು . ಮೇಲೆ ಹೇಳಿದಂತೆ ಪ್ರಿಂಟರ್ ಗಳನ್ನು ಇಟ್ಟಿದ್ದ ಸ್ಥಳಗಳನ್ನು ಆರೋಪಿತರು ಅವರಿಗೆ ತೋರಿಸಿದರು . ಸದರಿ ಸ್ಥಳಗಳಲ್ಲಿ ಪೊಲೀಸರು ಮಹಜರು ಮಾಡಿದ್ದಾರೆ .

ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -3 ಎಂದು ಸಾಕ್ಷಿ ಸಹಿಯನ್ನು ನಿಪಿ -3 (ಎ) ಎಂದು ಗುರುತಿಸಲಾಯಿತು. ನಿಪಿ -3 ಕ್ಕೆ ನನ್ನೊಡನೆ ಚಾಸಾ -5 ರವರು ಸಹಿ ಮಾಡಿದ್ದಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

ಪಾಟೀಸವಾಲುಃ ಸ ಸ ಅ ರವರಿಂದಃ-

ದಿಃ 01-06-2024 ರಂದು ಪೋಲೀಸರು ಪ್ರಿಂಟರ್ ಗಳು ಕಳವು ಆಗಿದ್ದ ಸ್ಥಳದಲ್ಲಿ ನಿಪಿ -3 ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ . ಆ ಸಮಯ ನನ್ನೊಡನೆ ಚಾಸಾ -6 ರವರು ಸಹಾ ನಿಪಿ -3 ಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿ . ಸದರಿ ಪಂಚನಾಮೆ ಬರೆಯುವಾಗ ಸಂಜೆ 4.30 ರಿಂದ 5.30 ಗಂಟೆ ಆಗಿತ್ತು ಎಂದರೆ ಸರಿ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಮೇಲೆ ಹೇಳಿದ ದಿನಾಂಕದಂದು ನಾನು ಕಚೇರಿಗೆ ಬರುವ ಮೊದಲೇ ಕೆಲವು ಸಿಬ್ಬಂದಿಗಳು ಬಂದಿದ್ದರು ಎಂದರೆ ಸರಿ .ಮೇಲೆ ಹೇಳಿದ ಪ್ರಿಂಟರ್ ಗಳ ಸೀರಿಯಲ್ ನಂಬರ್ ಗಳು ಗೊತ್ತಿಲ್ಲ .ನಾನು ನನ್ನ ಕಚೇರಿಗೆ ಬರುವ ಮೊದಲೇ ಡಿ ದರ್ಜೆ ನೌಕರರು ಕಚೇರಿಗೆ ಬಂದು ಹೋಗಿದ್ದರು ಎಂದರೆ ಸರಿ . ತಾಲ್ಲೂಕು ಕಚೇರಿಯಲ್ಲಿ ಬೆಳಗ್ಗೆ 10.30 ರಿಂದ ಸಂಜೆ 6.00 ಗಂಟೆಯವರೆಗೆ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ . ಮೇಲೆ ಹೇಳಿದ ದಿನಾಂಕದಂದು ನನ್ನೊಡನೆ ನಿಪಿ -3 ಕ್ಕೆ ಯಾವುದೇ ಸಾರ್ವಜನಿಕರು ಸಹಿ ಮಾಡಿಲ್ಲ . ಮೇಲೆ ಹೇಳಿದ ದಿನಾಂಕದಂದು ಪೊಲೀಸರು ನಮ್ಮ ಕಚೇರಿಗೆ ಬಂದಿಲ್ಲ , ಠಾಣೆಯಲ್ಲಿ ಕುಳಿತು ನಿಪಿ -3 ನ್ನು ಸೃಷ್ಟಿಸಿದ್ದೇನೆ , ನಾನು ಅಲ್ಲಿಯೇ ನಿಪಿ -3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.